

(6ನೇ ಪುಟದಿಂದ)

ಸಂಗ್ರಹಿಸಿ ಹೆಸರಿಸಿದ್ದಾರೆ. ಇದೇ ವರ್ಗದ ಬೇರೆ ಪ್ರಭೇದವನ್ನು ಮೇಘಾಲಯದಿಂದ ಸಂಗ್ರಹಿಸಿ ಡೆಂಡ್ರೊಬಿಯಮ್ ಕ್ರಪೀಡೆಟಮ್ ಎಂದೂ ಹೆಸರಿಸಿದ್ದಾರೆ.

ಗ್ರೀಕ್ ಭಾಷೆಯಲ್ಲಿ ಡೆಂಡ್ರೊನ್ ಅಂದರೆ ಮರ. ಈ ಪದದ ಅರ್ಥ ಮರದ ಮೇಲಿರುವ ಜೀವಿ ಎಂದು. ಡೆಂಡ್ರೊಬಿಯಮ್ ಜಾತಿಗೆ ಸೇರಿದ ಪ್ರಭೇದಗಳೆಲ್ಲವೂ ಅಪ್ಪು ಸಸ್ಯಗಳು. ಈ ಜಾತಿ ಸೂಚಕ ಹೆಸರನ್ನು ಓಲಾಫ್ ಸ್ವಾರ್ಟ್ಜ್ ಎಂಬವರು ಕ್ರಿ.ಶ.1799 ರಲ್ಲಿ ನಾಮಕರಣ ಮಾಡಿದ್ದಾರೆ.

ಈ ಪ್ರಭೇದದ ಸಸ್ಯದಲ್ಲಿ ಎಲೆ ಇರುವಾಗ ಹೂಗಳಿರುವುದಿಲ್ಲ. ಹೂಗಳಿರುವಾಗ ಎಲೆಗಳಿರುವುದಿಲ್ಲ. ಮಾರ್ಚ್ ನಿಂದ ಏಪ್ರಿಲ್ ತಿಂಗಳವರೆಗೆ ಹೂವು ಅರಳುವುದನ್ನು ನೋಡಬಹುದು. ಡೆಂಡ್ರೊಬಿಯಮ್ ವರ್ಗದಲ್ಲಿ ಸುಮಾರು 1600 ಪ್ರಭೇದಗಳಿವೆಯೆಂದೂ ಅಂದಾಜು ಮಾಡಲಾಗಿದೆ. ಈ ಪ್ರಭೇದಗಳು ಭಾರತ, ಮ್ಯಾನ್ಮಾರ್, ಶ್ರೀಲಂಕಾ, ಜಪಾನ್, ಕೊರಿಯ, ಇಂಡೋನೇಷ್ಯಾ ಮತ್ತು ಮಲೇಷ್ಯಾಗಳಲ್ಲಿ ಕಂಡುಬರುತ್ತವೆ. ಭಾರತದಲ್ಲಿ ಕಂಡು ಬರುವ ಪ್ರಭೇದಗಳು 102. ಅವುಗಳ ಪೈಕಿ ಕರ್ನಾಟಕದಲ್ಲಿ 17 ಪ್ರಭೇದಗಳಿವೆ.

ಕರ್ನಾಟಕದ ಪಶ್ಚಿಮ ಘಟ್ಟದಲ್ಲಿರುವ ಸಸ್ಯಾವರ್ಣದಲ್ಲಿ ಆರ್ಕಿಡ್‌ಗಳು ಹೆಚ್ಚಿನ ಪ್ರಮಾಣದಲ್ಲಿವೆ. ಇದಕ್ಕೆ ಪ್ರಮುಖ ಕಾರಣ ಇಲ್ಲಿನ ಉಷ್ಣ ವಾತಾವರಣ. ವರ್ಷದ ಎಲ್ಲ ಋತುವಿನಲ್ಲೂ ಒಂದಲ್ಲ ಒಂದು ಜಾತಿ, ಪ್ರಭೇದದ ಆರ್ಕಿಡ್‌ಗಳು ಹೂವುಗಳನ್ನು ಬಿಡುತ್ತವೆ.

ಮಾರುಕಟ್ಟೆಯಲ್ಲಿ ಈಗ ಸಾವಿರಾರು ಜಾತಿಯ ಹೈಬ್ರಿಡ್ ತಳಿಯ ಆರ್ಕಿಡ್‌ಗಳು ಲಭ್ಯವಿವೆ. ವೈವಿಧ್ಯಮಯ ಬೆಲೆಯಲ್ಲೂ ಸಿಗುತ್ತವೆ.



